# ಬಿರುಡೆ ಚೆಂಬಿನ ಮಹಿಮೆ!



ಒಂದು ಗ್ರಾಮದಲ್ಲಿ ಶಿವಯ್ಯ–ಪಾರ್ವತಿ ಎಂಬ ದಂಪತಿ ಇದ್ದರು. ಅವರಿಗೆ ಒಂದೇ ಒಂದು ಎಕರೆ ಭೂಮಿ ಇತ್ತು. ಇಬ್ಬರೂ ಎಷ್ಟೋ ಶ್ರಮಪಟ್ಟು ಕೃಷಿ ಮಾಡಿ ಆ ಭೂಮಿಯಲ್ಲಿ ನಾನಾ ವಿಧದ ತರಕಾರಿಗಳನ್ನು ಬೆಳೆಯುತ್ತಿದ್ದರು. ಅದನ್ನು ಮಾರಿ, ತಮ್ಮ ಜೀವನವನ್ನು ನಡೆಸಿಕೊಂಡಿದ್ದರು. ಹೀಗೆ ಒಂದು ದಿನ ಸಸಿ ನೆಡಲು ಗುಣಿ ಅಗೆಯುವಾಗ ಅವರಿಗೆ ಒಂದು ಕಂಚಿನ, ಬಿರುಡೆ ಇರುವ ಚೆಂಬು ಸಿಕ್ಕಿತು. ಕಣ್‌ಗಳಿಗೊತ್ತಿಕೊಂಡು ಅದನ್ನು ನೆಲದಿಂದ ಎತ್ತಿಕೊಂಡರು. ತಕ್ಷಣವೇ ಕುತೂಹಲದಿಂದ ಆ ಚೆಂಬಿನ ಬಿರಡೆಯನ್ನು ತೆರೆದರು.

'ಈ ಗಾಂಧರ್ವ ದೇವನಿಗೆ ಶಾಪ ವಿಮೋಚನೆ ಕೊಡಿಸಿದಿರಿ, ಹೋಗಿ! ಇನ್ನು ನಿಮಗೆಲ್ಲಾ ಒಳ್ಳೆಯದೇ ಆಗುತ್ತದೆ' ಎಂದು ಯಾರೋ ಹೇಳಿದಂತೆ ಕೇಳಿಸಿತು ಅವರಿಗೆ. ಅಂದು ತರಕಾರಿಗಳನ್ನು ಮಾರಿದ್ದರಿಂದ ಬಂದ ಹಣವನ್ನು ರಾತ್ರಿ ಮಲಗುವ ಮುನ್ನ ಆ ಬಿರುಡೆ ಚೆಂಬಿನಲ್ಲಿ ಹಾಕಿಟ್ಟರು.

ಮಾರನೆಯ ದಿನ ಚೆಂಬಿನ ಬಿರುಡೆ ತೆಗೆದು ನೋಡಿದರೆ ಹಣ ದ್ವಿಗುಣವಾಗಿತ್ತು. ಹಾಗೆ ಸಂಪಾದಿಸಿದ ಹಣವನ್ನೆಲ್ಲಾ ಬಿರುಡೆ ಚೆಂಬಿನಲ್ಲಿ ಇರಿಸಿ, ಒಂದಕ್ಕೆ ಎರಡು ಪಟ್ಟಿನಷ್ಟು ಹಣವನ್ನು ಸಂಗ್ರಹಿಸತೊಡಗಿದರು. ಇದರಿಂದ ಅವರು ಮತ್ತಷ್ಟು ಭೂಮಿಯನ್ನು ಕೊಂಡರು. ಮತ್ತಷ್ಟು ದಿನಗಳ ಅನಂತರ ಒಂದು ದೊಡ್ಡದಾದ ಮನೆಯನ್ನು ಕಟ್ಟಿಸಿಕೊಂಡರು. ಪಾರ್ವತಿ ಮೈತುಂಬ ಆಭರಣಗಳು ತುಂಬಿದವು.

ಅಂದು ಪಾರ್ವತಿ ತಮ್ಮ ನರಸಪ್ಪ ಅವರ ಮನೆಗೆ ಬಂದ. ಅವರ ಪರಿಸ್ಥಿತಿ ಕಂಡು ಬೆರಗಾದ. ಪಾರ್ವತಿ, ಬಿರುಡೆ ಚೆಂಬಿನ ಮಹಿಮೆಯನ್ನು ನರಸಪ್ಪನಿಗೆ ಅರುಹಿದಳು. ಆ ಮಾತುಗಳನ್ನು ಕೇಳಿ ಅಸೂಯೆಗೊಂಡ ನರಸಪ್ಪನಿಗೆ ರಾತ್ರಿ ನಿದ್ರೆ ಹತ್ತಲಿಲ್ಲ. ಸಂಚು ಮಾಡಿ ಅರ್ಧ ರಾತ್ರಿಯಲ್ಲಿ ಬಿರುಡೆ ಚೆಂಬನ್ನು ಕದ್ದುಕೊಂಡು ಪರಾರಿಯಾದ!

ನರಸಪ್ಪ ಬಡ್ಡಿ ವ್ಯಾಪಾರಿಯಾದ್ದರಿಂದ, ಬಡ್ಡಿ ಹಣವನೆಲ್ಲಾ ಬಿರುಡೆ ಚೆಂಬಿನಲ್ಲಿರಿಸಿ ಮುಚ್ಚಿಟ್ಟ. ಬೆಳಗಾಗುತ್ತಲೇ ಕುತೂಹಲದಿಂದ ಚೆಂಬಿನ ಬಿರುಡೆ ತೆರೆದು ನೋಡಿದ. ಆಶ್ಚರ್ಯ! ಆ ಹಣವು ದ್ವಿಗುಣವಾಗದೇ, ಅರ್ಧ ಭಾಗ ಕಡಿಮೆಯಾಗಿತ್ತು. ಮಾರನೆಯ ದಿನವೂ ಚೆಂಬಿನಲ್ಲಿರಿಸಿದ ಹಣ ಅರ್ಧ ಕಡಿಮೆಯಾಗಿತ್ತು! 'ಇದೇನೋ ಲೆಕ್ಕಾಚಾರ ತಿರುಮರುವು ಆಗಿದೆ' ಅಂದುಕೊಂಡ ನರಸಪ್ಪ, ಅಂದಿನಿಂದಲೇ ಹಣವನ್ನು ಬಿರುಡೆ ಚೆಂಬಿನೊಳಕ್ಕೆ ಹಾಕಲಿಲ್ಲ.

ಬೆಳಗಾಗೆದ್ದು ಕಬ್ಬಿಣ ಪೆಟ್ಟಿಗೆಯನ್ನು ತೆರೆದು ನೋಡಿದರೆ ಅಲ್ಲಿದ್ದ ಹಣವೂ ಅರ್ಧ ಭಾಗ ಕಡಿಮೆಯಾಗಿತ್ತು. 'ಇತರರ ಕಷ್ಟಗಳನ್ನು ದೋಚುವವರಿಗೆ ನಷ್ಟ ಕಟ್ಟಿಟ್ಟ ಬುತ್ತಿ' ಎಂದು ಯಾರೋ ಹೇಳಿದಂತೆ ನರಸಪ್ಪನಿಗೆ ಕೇಳಿಸಿತು.

ಇದರಿಂದ ಬುದ್ಧಿ ಬಂದ ನರಸಪ್ಪ, ಬಿರುಡೆ ಚೆಂಬನ್ನು ಮರಳಿ ತೆಗೆದುಕೊಂಡ್ಹೋಗಿ ಶಿವಯ್ಯ–ಪಾರ್ವತಿಗೆ ಕೊಟ್ಟು ಅವರ ಕ್ಷಮೆಯಾಚಿಸಿದ.

**-ಜಿ.ವಿ.ಪ್ರಭು, ಬೆಂಗಳೂರು**

## ನಿಮಗೆಷ್ಟು ಗೊತ್ತು

### 'ನಾಳೆ'ಯ ವಸ್ತು ಸಂಗ್ರಹಾಲಯ



ಬ್ರೆಜಿಲ್‌ನ ರಿಯೊ ದ ಜನ್ಯೆರೊ ನಗರದಲ್ಲಿರುವ ಈ ನಾಳೆಯ ವಸ್ತು ಸಂಗ್ರಹಾಲಯ (ಮ್ಯೂಸಿಯಂ ಆಫ್ ಟುಮಾರೊ)ದಲ್ಲಿ ಕಣ್ಮನ ತಣಿಸುವ ವಸ್ತುಗಳಿಲ್ಲ. ಆದರೆ ಕುತೂಹಲ ಕೆರಳಿಸುವ ಯೋಜನೆಗಳಿವೆ, ನಾಳೆಯನ್ನು ಕಟ್ಟುವ ಆಲೋಚನೆಗಳಿವೆ. ಕಳೆದ ಡಿಸೆಂಬರ್‌ನಲ್ಲಿ ಆರಂಭವಾದ ಇದನ್ನು ವೈಜ್ಞಾನಿಕ ಆಲೋಚನೆಗಳಿಗೆ ನಮ್ಮನ್ನು ಹಚ್ಚುವ ಸಂಗ್ರಹಾಲಯ ಎಂದೇ ಹೇಳಲಾಗುತ್ತಿದ್ದು, ಬ್ರಹ್ಮಾಂಡ, ಭೂಮಿ, ಇಡೀ ಭೂಮಿಯ ಇತಿಹಾಸ, ವರ್ತಮಾನ ಮತ್ತು ಭವಿಷ್ಯ, ಇಂದು ಹಾಗೂ ನಾಳೆ ಎಂಬ ಐದು ವಿಭಾಗಗಳಿವೆ.

ವೈಜ್ಞಾನಿಕ ಪರಿಕಲ್ಪನೆಯ ಮೇಲೆ ಸುಸ್ಥಿರ ನಗರಗಳನ್ನು ಕಟ್ಟುವುದು ಹೇಗೆ ಎಂಬುದು ಪ್ರಮುಖ ವಿಷಯ. ಬದಲಾಗುತ್ತಿರುವ ಜಾಗತಿಕ ತಾಪಮಾನಕ್ಕೆ ತಕ್ಕಂತೆ ನೈಸರ್ಗಿಕ, ಪುನರ್‌ಬಳಕೆ ಶಕ್ತಿಯನ್ನು ಬಳಸುವುದು ಹೇಗೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಒಟ್ಟಿನಲ್ಲಿ ನಾಳೆ ಇಂದಿನಂತಿರುವುದಿಲ್ಲ, ಅದಕ್ಕೆ ಸರಿಯಾಗಿ ಇಂದೇ ಸಿದ್ಧರಾಗೋಣ ಎಂಬುದರ ಚಿತ್ರಣ ಈ ವಸ್ತು ಸಂಗ್ರಹಾಲಯದಲ್ಲಿದೆ.

**-ಸುಧಿ**